ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ ಕಾರ್ಯಾಲಯ, ಹಾವೇರಿ 581110

ದೂರವಾಣಿ : 08375–249033,
ಫ್ಯಾಕ್ಸ : 08375–249037
E-Mail : ceo_zp_hvr@nic.in

ಕ್ರಸಂ:ಹಾಜಿಪಂ/ಅಭಿ–1/ಉಖಾಯೋ/ಅಗ್ರಾಪಸಂಅ/ವಹಿ– /2020–21 ದಿನಾಂಕಃ03–03–2021

ಸಹಾಯಕ ನಿರ್ದೇಶಕರು,
ವಾರ್ತಾ ಮತ್ತು ಪ್ರಚಾರ ಇಲಾಖೆ,
ಹಾವೇರಿ
ಇವರಿಗೆ.

ಮಾನ್ಯರೇ,

ವಿಷಯಃ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಹುದ್ದೆಗಳನ್ನು ನೇಮಕ ಮಾಡಲು ಪ್ರಕಟಣೆ ಹೊರಡಿಸುವ ಬಗ್ಗೆ.

** ** **

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಹೊರಗುತ್ತಿಗೆ ಆಧಾರದ ಮೇಲೆ ತಾಂತ್ರಿಕ ಸಹಾಯಕರು (ಸಿವಿಲ್), ತಾಂತ್ರಿಕ ಸಂಯೋಜಕರು (ಸಿವಿಲ್) ಮತ್ತು ತಾಂತ್ರಿಕ ಎಂ.ಐ.ಎಸ್. ಸಂಯೋಜಕರ ಹುದ್ದೆಗಳನ್ನು ನೇಮಕ ಮಾಡುವ ಕುರಿತು ಅರ್ಜಿಗಳನ್ನು ಆಹ್ವಾನಿಸುತ್ತಿದ್ದು ಕಾರಣ ಸದರಿ ಪತ್ರಿಕಾ ಪ್ರಕಟಣೆಯನ್ನು ಪ್ರಚಲಿತ ರಾಜ್ಯ ದಿನಪತ್ರಿಕೆಯಲ್ಲಿ ಕನಿಷ್ಠ ಕಾಲಂ ಸೈಜಿನಲ್ಲಿ ರಾಜ್ಯ ಮಟ್ಟದ 1 ಹಾಗೂ ಸ್ಥಳೀಯ ಮಟ್ಟದ 1 ದಿನಪತ್ರಿಕೆಗಳಲ್ಲಿ ದಿನಾಂಕಃ08–03–2021 ರಂದು ಇಲಾಖೆಯಿಂದ ನಿಗದಿಪಡಿಸಿದ ದರದಲ್ಲಿ ನಿಯಮಾನುಸಾರ ಜಾಹೀರಾತನ್ನು ಪ್ರಕಟಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ.

ಅಡಕಃ ಪತ್ರಿಕಾ ಪ್ರಕಟಣೆ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ, ಹಾವೇರಿ

E:\CHETANA-2020-21\MGNREGA\03-03-2021 Patrika Prakatane.doc

ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ ಕಾರ್ಯಾಲಯ, ಹಾವೇರಿ 581110

ದೂರವಾಣಿ : 08375-249033,
ಫ್ಯಾಕ್ಸ : 08375-249037
E-Mail : ceo_zp_hvr@nic.in

ಕ್ರಸಂ:ಹಾಜಿಪಂ/ಅಭಿ-1/MGNREGA/ಹೊ.ಗು/ವಹಿ- /2020-21 ದಿನಾಂಕ: 03-03-2021

## :: ಪತ್ರಿಕಾ ಪ್ರಕಟಣೆ ::

ವಿಷಯ : ಹಾವೇರಿ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೊರಗುತ್ತಿಗೆ ಆಧಾರದ ಮೇಲೆ ತಾಂತ್ರಿಕ ಸಹಾಯಕರು (ಸಿವಿಲ್) ತಾಂತ್ರಿಕ ಸಂಯೋಜಕರು (ಸಿವಿಲ್), ತಾಲೂಕಾ ಎಂ.ಐ.ಎಸ್., ಸಂಯೋಜಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸುವ ಬಗ್ಗೆ.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/712/ಉಖಾಯೋ/2016, ದಿ: 12-01-2021.

* * * *

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಮತ್ತು ಕಾಮಗಾರಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ ಹಾವೇರಿ ಜಿಲ್ಲೆಯ ತಾಲೂಕುಗಳಲ್ಲಿ 01 ತಾಲೂಕು MIS ಸಂಯೋಜಕರು (TMIS), 06 ತಾಲೂಕಾ ತಾಂತ್ರಿಕ ಸಂಯೋಜಕರು (TC), ಮತ್ತು 14 ತಾಂತ್ರಿಕ ಸಹಾಯಕರು (TAE) ಹುದ್ದೆಗಳಿಗೆ ಉಲ್ಲೇಖಿತ ಪತ್ರದಲ್ಲಿ ಸೂಚಿಸಿದಂತೆ, ಕಾರ್ಯದಕ್ಷತೆ ಮತ್ತು ಸಾಮರ್ಥ್ಯದ ಮೇರೆಗೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯಲು ಈ ಕೆಳಕಂಡ ಪಟ್ಟಿಯಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

| ಕ್ರ ಸಂ | ಹುದ್ದೆಯ ಹೆಸರು | ವಿದ್ಯಾರ್ಹತೆಗಳು | ಹುದ್ದೆಗಳ ಸಂಖ್ಯೆ | ಮಾಸಿಕ ವೇತನ | ಅನುಭವ | ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ದಿನಾಂಕ ಮತ್ತು ಆನ್ ಲೈನ್ ವೆಬ್ ಸೈಟ್ ವಿಳಾಸ | ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ದಿನಾಂಕ ಮತ್ತು ಸಮಯ |
|---|---|---|---|---|---|---|---|
| *1* | *2* | *3* | *4* | *5* | *6* | *8* | *9* |
| 1 | ತಾಲೂಕು MIS ಸಂಯೋಜಕರು, | MCA or Graduation in Engineering in Computer/Electronics or any other equivalent qualification in absence of such condidates mentioned above Graduation PGDCA or any other equivalent cource by the recognised University. The Person shall not be more than 40 Years in age (For Candidates already working in MGNREGS the upper age limit shall be 44 Years) | 1 | 18000 | ಕನಿಷ್ಠ 2 ವರ್ಷ | | |
| 2 | ತಾಲೂಕಾ ತಾಂತ್ರಿಕ ಸಂಯೋಜಕರು | Minimum B.E/B.Tech in Civil Engineering including use of Internet (Note : Diploma Candidates are not eligible) The Age shall not be more than 45 years (Relaxation of 4 years shall be given to candidates already working in MGNREGA) | 6 | 29000+ 1500 | ಕನಿಷ್ಠ 3 ವರ್ಷ | ದಿ: 08-03-2021 ರಿಂದ 22-03-2021 **https://haveri.nic.in/** | ದಿ: 26-03-2021 ಸಮಯ : ಬೆಳಗ್ಗೆ 10-30 ರಿಂದಾ ಸಂಜೆ 5-00 ರವರೆಗೆ ಸ್ಥಳ : ಜಿಲ್ಲಾ ಪಂಚಾಯತ ಹಾವೇರಿ ಸಭಾಂಗಣ |
| 3 | ತಾಂತ್ರಿಕ ಸಹಾಯಕರು | Diploma/B.E/B.Tech in Civil Engineering including use of Internet. The Age shall not be more than 45 years (Relaxation of 4 years shall be given to candidates already working in MGNREGA) | 14 | 19000+ 1500 (Diploma) 24000+ 1500 (B.E/B.Tech in Civil Engineering) | ಕನಿಷ್ಠ 2 ವರ್ಷ | | |

**ವಿಶೇಷ ಸೂಚನೆ :**

1) Online ಮೂಲಕ ಮಾತ್ರ **https://haveri.nic.in/**Website ನಲ್ಲಿ ಅರ್ಜಿಯನ್ನು ಸಲ್ಲಿಸುವುದು.
2) Online ಮೂಲಕ ಅರ್ಜಿ ಸಲ್ಲಿಸಲು **ಪ್ರಾರಂಭ ದಿನಾಂಕ: 08-03-2021 ಮುಕ್ತಾಯ ದಿನಾಂಕ: 22-03-2021.**
3) ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನಮೂದಿಸಿರುವ ದಾಖಲೆಗಳ ಮೂಲ ಪ್ರತಿಗಳನ್ನು ದಾಖಲಾತಿ ಪರಿಶೀಲನೆ ಸಂದರ್ಭದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು.
4) ಮೂಲ ದಾಖಲೆಗಳನ್ನು ಪರಿಶೀಲಿಸಲು ನಿಗದಿಪಡಿಸಿರುವ **ದಿನಾಂಕ 26-03-2021 ರಂದು ಸಂಜೆ 5.00** ರೊಳಗಾಗಿ ಹಾಜರಾಗುವ ಅಭ್ಯರ್ಥಿಗಳ ದಾಖಲೆಗಳನ್ನು ಮಾತ್ರ ಪರಿಶೀಲಿಸಲಾಗುವುದು.
5) ಸಂಬಂಧಪಟ್ಟ ವಿಷಯದಲ್ಲಿ ಪದವಿ ಹೊಂದಿದ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಪದವೀಧರರು ಲಭ್ಯವಿಲ್ಲದೇ ಇದ್ದಲ್ಲಿ ಮಾತ್ರ ಡಿಪ್ಲೊಮಾ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಲಾಗುವುದು.
6) 45 ವರ್ಷ ಮೇಲ್ಪಟ್ಟವರಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
7) ದಾಖಲಾತಿ ಪರಿಶೀಲನೆಯಲ್ಲಿ ಅರ್ಹಗೊಂಡ ಅಭ್ಯರ್ಥಿಗಳನ್ನು ವಿದ್ಯಾರ್ಹತೆಯಲ್ಲಿ ಹೊಂದಿದ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ, ಸದರಿ ಪಟ್ಟಿಯಲ್ಲಿ ಗರಿಷ್ಠ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಹುದ್ದೆಗೆ ಆಯ್ಕೆ ಮಾಡಲಾಗುವುದು. (ಸರ್ಕಾರದಿಂದ ನಿಗದಿಪಡಿಸಿರುವ ಎಲ್ಲಾ ಮಾರ್ಗ ಸೂಚಿಗಳನ್ವಯ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುವುದು)
8) ಜಿಲ್ಲೆಯಲ್ಲಿ ಯಾವುದೇ ತಾಲೂಕಿನಲ್ಲಿ ನಿಯೋಜಿಸಿದರೂ ಕೆಲಸ ಮಾಡಲು ಸಿದ್ದರಿರಬೇಕು.
9) ಹುದ್ದೆಗೆ ಆಯ್ಕೆ ಮಾಡಲಾದ ಅಭ್ಯರ್ಥಿಗಳು ನಿಯೋಜಿಸಿದ ಸ್ಥಳಕ್ಕೆ ಒಂದು ವಾರದೊಳಗಾಗಿ ಹಾಜರಾಗದಿದ್ದಲ್ಲಿ ಅರ್ಹತಾ ಪಟ್ಟಿಯಲ್ಲಿನ ನಂತರದ ಅಭ್ಯರ್ಥಿಯನ್ನು ಆಯ್ಕೆಗೆ ಪರಿಗಣಿಸಲಾಗುವುದು.
10) Online ಅರ್ಜಿಯಲ್ಲಿರುವ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡತಕ್ಕದ್ದು.
11) ಅರ್ಜಿಯೊಂದಿಗೆ ಲಗತ್ತಿಸಬೇಕಾದ (Upload) ದಾಖಲೆಗಳು.
    (ಅ) ಸಹಿಯೊಂದಿಗೆ ದೃಢೀಕರಿಸಿದ ಇತ್ತೀಚಿನ ಭಾವಚಿತ್ರ (In jpg Format)
    (ಆ) ಎಸ್. ಎಸ್. ಎಲ್. ಸಿ., ಅಂಕಪಟ್ಟಿ (In pdf File)
    (ಇ) ಶೈಕ್ಷಣಿಕ ವಿದ್ಯಾರ್ಹತೆಯ ಎಲ್ಲ ಸೆಮಿಸ್ಟರ್/ವರ್ಷಗಳ ಅಂಕಪಟ್ಟಿಗಳ ಪ್ರತಿ (In pdf File)
    (ಈ) ಕಾರ್ಯಕ್ಷೇತ್ರದಲ್ಲಿ ಅನುಭವ ಪ್ರಮಾಣ ಪತ್ರ, (In pdf File)
12) ಅರ್ಹ ಅಭ್ಯರ್ಥಿಗಳನ್ನು ನಿಗದಿ ಪಡಿಸಿದ ವಿದ್ಯಾರ್ಹತೆಗನುಗುಣವಾಗಿ ಮತ್ತು ಸರ್ಕಾರದಿಂದ ಹೊರಡಿಸಲಾದ ಮಾರ್ಗಸೂಚಿ ಮತ್ತು ಆದೇಶಗಳಂತೆ ಮೆರಿಟ್ ಪಟ್ಟಿಯನ್ನು ತಯಾರಿಸಲಾಗುವುದು.
13) ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸರ್ಕಾರದಿಂದ ಯಾವುದೇ ವಿಧವಾದ ಭತ್ಯೆ ನೀಡಲಾಗುವುದಿಲ್ಲ.
14) ಹೊರಗುತ್ತಿಗೆ ಆಧಾರದ ಸಿಬ್ಬಂದಿಗಳ ಸೇವೆ ಪಡೆಯಲು ಯಾವುದೇ ನೇರ ಸಂದರ್ಶನ ಅಥವಾ ಲಿಖಿತ ಪರೀಕ್ಷೆ ಇರುವುದಿಲ್ಲ.
15) ಮೆರಿಟ್ ಮೇಲೆ ಆಯ್ಕೆಯಾದ ಅಭ್ಯರ್ಥಿಗಳ ಸೇವೆಯನ್ನು ಜಿಲ್ಲೆಯಲ್ಲಿ ಅನುಮೋದಿತ ಮಾನವ ಸಂಪನ್ಮೂಲ ಸಂಸ್ಥೆಗಳ ಮುಖಾಂತರ ಸೇವೆ ಪಡೆದುಕೊಳ್ಳಲಾಗುವುದು.
16) ಹೊರಗುತ್ತಿಗೆ ಸೇವಾ ಅವಧಿಯು 11 ತಿಂಗಳಾಗಿದ್ದು ಇವರ ಕಾರ್ಯಕ್ಷಮತೆ ಪರಿಶೀಲಿಸಿ ಹೊರಗುತ್ತಿಗೆ ಸೇವೆ ಮುಂದುವರೆಸುವ ಅಧಿಕಾರ ಈ ಕೆಳಗೆ ಸಹಿ ಮಾಡಿದವರಿಗೆ ಇರುತ್ತದೆ.
17) ನೇಮಕಗೊಂಡ ಹೊರಗುತ್ತಿಗೆ ಸಿಬ್ಬಂದಿಯು ವಾರ್ಷಿಕ 12 ದಿನಗಳ ಸಾಂದರ್ಭಿಕ ರಜೆ ಪಡೆಯಬಹುದು.
18) ಮಹಿಳೆಯರು Maternity Benefit Act 1961 ರಡಿಯಲ್ಲಿ ಹೆರಿಗೆ ರಜೆ ಪಡೆಯಲು ಅರ್ಹರಾಗಿರುತ್ತಾರೆ.
19) ಆಯ್ಕೆಯಾದ ಅಭ್ಯರ್ಥಿಗಳು ತಾವು ನಿರ್ವಹಿಸುವ ಸ್ಥಳದಲ್ಲಿ ಅವ್ಯವಹಾರ ಅಥವಾ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಸಾಬೀತಾದಲ್ಲಿ ತಕ್ಷಣವೇ ಕೆಲಸದಿಂದ ತೆಗೆದುಹಾಕಲಾಗುವುದು ಹಾಗೂ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.
20) ಭರ್ತಿಯಾದ ಹುದ್ದೆಗಳಲ್ಲಿ ಅನಿವಾರ್ಯ ಕಾರಣ ನಿಮಿತ್ತ ಖಾಲಿಯಾದಲ್ಲಿ ಮೇಲ್ಕಾಣಿಸಿದ ರೀತಿಯಲ್ಲಿಯೇ ಮಾನವ ಸಂಪನ್ಮೂಲ ಸಂಸ್ಥೆಗಳ ಮೂಲಕ ಹೊರಗುತ್ತಿಗೆ ಆಧಾರದ ಸೇವೆ ಪಡೆಯಲಾಗುವುದು.
21) ಒಂದು ವೇಳೆ ಮೆರಿಟ್ ಆಧಾರದ ಮೇರೆಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸಲಾಗುವುದು. ಮೆರಿಟ್ ಆಧಾರದ ಪ್ರತೀಕ್ಷಾ ಪಟ್ಟಿಯಲ್ಲಿರುವ (Waiting List) ಅಭ್ಯರ್ಥಿಗಳನ್ನು ಖಾಲಿಯಾಗುವ ಈ ಹುದ್ದೆಗಳಿಗೆ ಆಯ್ಕೆಗೆ ಪರಿಗಣಿಸಲಾವುದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ, ಹಾವೇರಿ

**ಪ್ರತಿ :**

1. ಆಯುಕ್ತರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಪದನಿಮಿತ್ತ ಹಾಗೂ ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
2. ರಕ್ಷಾ ಕಡತಕ್ಕೆ.